

# ಬಿಡುವಿಲ್ಲದ ನಟಿ ಶ್ರದ್ಧಾ



‘ಬಾಹುಬಲಿ’ ಚಿತ್ರದಿಂದ ಬಾಲಿವುಡ್‌ನಲ್ಲಿ ಸಂಚಲನ ಸೃಷ್ಟಿಸಿರುವ ಪ್ರಭಾಸ್ ಜತೆಗೆ ‘ಸಾಹೂ’ ಚಿತ್ರದ ಶೂಟಿಂಗ್ ಮುಗಿಸಿರುವ ಶ್ರದ್ಧಾ ಕಪೂರ್‌ಳ ಮುಂದಿನ ಚಿತ್ರ ಶಾಹಿದ್ ಕಪೂರ್ ಜತೆಗೆ ಸೆಟ್ಟೇರಲು ಸಿದ್ಧವಾಗಿದೆ. ಆದರೆ ಶ್ರದ್ಧಾ ಇನ್ನೂ ಡೇಟ್ಸ್ ನೀಡಿಲ್ಲ ಎನ್ನುವುದು ಕುತೂಹಲಕರ ಅಂಶ. ‘ಬತ್ತಿ ಗುಲ್ ಮೀಟರ್ ಚಾಲೂ’ ಎನ್ನುವ ಹೆಸರಿನ ಈ ಚಿತ್ರದಲ್ಲಿ ಪ್ರೇಕ್ಷಕರನ್ನು ನಕ್ಕು ನಗಿಸುವ ಹಾಸ್ಯವಿದೆಯಂತೆ.

‘ಪದ್ಮಾವತಿ’ ಯಾನೆ ‘ಪದ್ಮಾವತ್’ ಸಿನಿಮಾ ಬಿಡುಗಡೆಗೆ ಕಾತುರದಿಂದ ಕಾಯುತ್ತಿರುವ ಶಾಹಿದ್ ಕಪೂರ್, ಇನ್ನೊಂದೆಡೆ ತನ್ನ ಹಳೆಯ ಗೆಳತಿ ಶ್ರದ್ಧಾ ಕಪೂರ್ ಡೇಟ್‌ಗೂ ಕಾಯುತ್ತಿದ್ದಾನೆ. ಈ ಹಿಂದೆ ‘ಹೈದರ್’ ಚಿತ್ರದಲ್ಲಿ ಶ್ರದ್ಧಾ ಮತ್ತು ಶಾಹಿದ್ ಇಬ್ಬರ ಜೋಡಿ ವೀಕ್ಷಕರ ಮತ್ತು ವಿಮರ್ಶಕರ ಭಾರೀ ಮೆಚ್ಚುಗೆ ಗಳಿಸಿತ್ತು. ಆ ಚಿತ್ರವೂ ತನ್ನ ಚಿತ್ರಕಥೆಯಿಂದಾಗಿ ಬಾಲಿವುಡ್‌ನ ವಿಭಿನ್ನ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

ಈ ಹಿಂದೆ ‘ಬತ್ತಿ ಗುಲ್...’ ಚಿತ್ರಕ್ಕೆ ಕತ್ರೀನಾ ಕೈಫ್ ನಾಯಕಿ ಎಂದು ಪ್ರಕಟಿಸಲಾಗಿತ್ತು. ಆದರೆ ಕತ್ರೀನಾ ಸದ್ಯಕ್ಕೆ ಎರಡು ಚಿತ್ರಗಳಲ್ಲಿ ನಟಿಸುತ್ತಿದ್ದು ಸಹಿ ಹಾಕಲು ಬಿಡುವೇ ಸಿಕ್ಕಿಲ್ಲವಂತೆ. ಹಾಗಾಗಿ ನಿರ್ಮಾಪಕರು ಶ್ರದ್ಧಾಳನ್ನು ಸಂಪರ್ಕಿಸಿದ್ದಾರೆ. ಆದರೆ ಶ್ರದ್ಧಾ ಹಳೆಯ ಗೆಳೆಯ ಶಾಹಿದ್ ಜತೆಗೆ ನಟಿಸಲು ಮೀನ ಮೇಷ ಎಣಿಸುತ್ತಿದ್ದಾಳೆ. ಇದೇಕೆ ಹೀಗೆ ಎಂದು ಬಾಲಿವುಡ್ ಪಂಡಿತರು ತಲೆ ಕೆರೆದುಕೊಳ್ಳುತ್ತಿದ್ದಾರೆ.

ಈ ಮಧ್ಯೆ ಶ್ರದ್ಧಾ ಅಭಿನಯಿಸಲು ರೆಡಿ ಆಗಿರುವ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಜೀವನ ಕುರಿತ ಚಿತ್ರದ ಶೂಟಿಂಗ್ ಅನಿರ್ದಿಷ್ಟ ಕಾಲ ಮುಂದಕ್ಕೆ ಹೋಗಿದೆ ಎನ್ನುವ ಸುದ್ದಿ ಬಂದಿದೆ. ಈ ಪಾತ್ರದ ಸಲುವಾಗಿ ಶ್ರದ್ಧಾ ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದಳು. ಸೈನಾ ಕೋಚ್ ಪುಲ್ಲೇಲ ಗೋಪಿಚಂದ್ ಅವರಿಂದ ಒಂದೂವರೆ ತಿಂಗಳ ಕಾಲ ಬ್ಯಾಡ್ಮಿಂಟನ್ ತರಬೇತಿಯನ್ನೂ ಪಡೆದಿದ್ದಳು. ಈಗ ಚಿತ್ರ ಹಠಾತ್ತನೆ ಮುಂದಕ್ಕೆ ಹೋಗಿರುವುದಕ್ಕೆ ಕಾರಣ ಗೊತ್ತಾಗಿಲ್ಲ.